# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1094** |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸರ್ಕಾರದ ವಿವಿಧ ಇಲಾಖೆಗಳ ಕಛೇರಿಯ ವಿದ್ಯುತ್ ಬಿಲ್ ಪಾವತಿಗೆ ಅನುದಾನದ ಕೊರತೆಯಿಂದಾಗಿ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಕೋಟ್ಯಾಂತರ ರೂ. ವಿದ್ಯುತ್ ಶುಲ್ಕ ಪಾವತಿ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಎಷ್ಟು ವಿದ್ಯುತ್ ಶುಲ್ಕ ಬಾಕಿ ಇದೆ; (ಹೆಸ್ಕಾಂವಾರು ಮಾಹಿತಿ ಒದಗಿಸುವುದು)</td><td>ಸರ್ಕಾರದ ವಿವಿಧ ಇಲಾಖೆಗಳು ಜನವರಿ 2025 ರ ಅಂತ್ಯಕ್ಕೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಲು ಬಾಕಿ ಇರುವ ವಿದ್ಯುತ್ ಶುಲ್ಕದ ವಿವರಗಳು ಈ ಕೆಳಕಂಡಂತಿದೆ:<br>(ರೂ. ಕೋಟಿಗಳಲ್ಲಿ)
<table>
<tr><th>ವಿದ್ಯುತ್ ಸರಬರಾಜು ಕಂಪನಿ</th><th>ಪಾವತಿಸಲು ಬಾಕಿ ಇರುವ ವಿದ್ಯುತ್ ಶುಲ್ಕ</th></tr>
<tr><td>ಬೆಸ್ಕಾಂ</td><td>4541.21</td></tr>
<tr><td>ಮೆಸ್ಕಾಂ</td><td>542.01</td></tr>
<tr><td>ಹೆಸ್ಕಾಂ</td><td>1505.17</td></tr>
<tr><td>ಜೆಸ್ಕಾಂ</td><td>1316.42</td></tr>
<tr><td>ಸೆಸ್ಕ್</td><td>764.22</td></tr>
<tr><td>ಹುಕ್ಕೇರಿ</td><td>21.16</td></tr>
<tr><td>ಒಟ್ಟು</td><td>8690.19</td></tr>
</table></td></tr>
<tr><td>ಆ)</td><td>ವಿದ್ಯುತ್ ಬಿಲ್ ಬಾಕಿ ಇರುವುದರಿಂದ ಸರ್ಕಾರಿ ಕಛೇರಿಗಳಲ್ಲಿ ವಿದ್ಯುತ್ ಸಂಪರ್ಕವನ್ನು ಎಸ್ಕಾಂ ಕಂಪನಿಗಳು ಕಡಿತಗೊಳಿಸುತ್ತಿರುವುದರಿಂದ ಕಛೇರಿಯ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ, ವಿದ್ಯುತ್ ಶುಲ್ಕ ಬಾಕಿ ಉಳಿಸಿಕೊಂಡಿರುವ ಸರ್ಕಾರಿ ಕಛೇರಿಗಳಿಗೆ ಬಿಲ್ಲು ಪಾವತಿಸಲು ನೀಡಿರುವ ಗಡುವು ದಿನಾಂಕದೊಳಗೆ ಬಿಲ್ಲು ಪಾವತಿಸದಿದ್ದಲ್ಲಿ, ಗಡುವು ದಿನಾಂಕದ ನಂತರ ಶುಲ್ಕ ಪಾವತಿಸದಿರುವ ಇಲಾಖೆಗಳ ಕಛೇರಿಗಳಿಗೆ 15 ದಿನಗಳ ಸ್ಪಷ್ಟ ನೋಟಿಸ್ ಜಾರಿ ಮಾಡಿ ಬಾಕಿ ಪಾವತಿಸದ ವಿದ್ಯುತ್ ಸ್ಥಾವರದ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಹಕ್ಕನ್ನು ನಿಗಮ / ಕಂಪನಿಗಳು ಹೊಂದಿರುತ್ತವೆ.<br><br>ಆದಾಗ್ಯೂ, ಸಾರ್ವಜನಿಕರಿಗೆ ಅಗತ್ಯ / ತುರ್ತು ಸೇವೆ ನೀಡುತ್ತಿರುವ ಸರ್ಕಾರಿ ಇಲಾಖೆಯ ಆಸ್ಪತ್ರೆ, ಶಾಲಾ ಕಾಲೇಜುಗಳು, ಪೋಲಿಸ್ ಠಾಣೆಗಳು ನ್ಯಾಯಾಲಯಗಳು ಹಾಗೂ ಕುಡಿಯುವ ನೀರು ಸರಬರಾಜು ಸ್ಥಾವರಗಳಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ವಿದ್ಯುತ್ ಸರಬರಾಜು ಕಡಿತಗೊಳಿಸಿರುವುದಿಲ್ಲ. ಹಾಗೂ ಉಳಿದ ಸರ್ಕಾರಿ ಇಲಾಖೆಯ ಸ್ಥಾವರಗಳಿಗೆ ವಿದ್ಯುತ್ ಶುಲ್ಕ ಬಾಕಿ ಪಾವತಿಸದೇ ಇದ್ದಲ್ಲಿ ನಿಗಮದ ನಿಯಮಾನುಸಾರ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಕ್ರಮವಹಿಸಲಾಗುತ್ತಿದೆ.</td></tr>
</table>

| | | |
|---|---|---|
| ಇ) | ಎಸ್ಕಾಂಗಳಿಗೆ ಪಾವತಿಸಲು ಬಾಕಿ ಇರುವ ವಿದ್ಯುತ್ ಶುಲ್ಕ ಪಾವತಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ; ಯಾವ ಕಾಲಮಿತಿಯೊಳಗೆ ಬಾಕಿ ಇರುವ ವಿದ್ಯುತ್ ಬಿಲ್‌ಗಳನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು? | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿಯ ಗ್ರಾಮ ಪಂಚಾಯಿತಿಗಳ ದಿನಾಂಕ: 31.03.2023 ರ ಅಂತ್ಯಕ್ಕಿರುವ ವಿದ್ಯುತ್ ಶುಲ್ಕದ ಬಾಕಿ ಮೊತ್ತದಲ್ಲಿನ ಅಸಲು ಮೊತ್ತ ರೂ. 5,257.70 ಕೋಟಿಗಳನ್ನು ಸರ್ಕಾರವು ಖಾತರೀ ಮೂಲಕ ತೀರುವಳಿಗೊಳಿಸಿದೆ.<br><br>ವಿವಿಧ ಸರ್ಕಾರಿ ಇಲಾಖೆಗಳು ವಿ.ಸ.ಕಂಪನಿಗಳಿಗೆ ಪಾವತಿಸಬೇಕಾಗಿರುವ ಬಾಕಿ ವಿದ್ಯುತ್ ಶುಲ್ಕದ ಮೊತ್ತವನ್ನು ಜರೂರಾಗಿ ಪಾವತಿಸುವ ವ್ಯವಸ್ಥೆ ಮಾಡುವಂತೆ ಕೋರಿ ಸಂಬಂಧಿಸಿದ ಇಲಾಖೆಗಳೊಂದಿಗೆ ಪತ್ರ ವ್ಯವಹರಿಸಲಾಗುತ್ತಿದೆ. |

ಸಂಖ್ಯೆ: ಎನರ್ಜಿ 64 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು